**<u>ಸಾಕ್ಷಿಗೆ ದಿನಾಂಕ 06-03-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಎದುರುದಾರರ ಪರ ಶ್ರೀ.ಎಂ ಕೆ ಎಸ್ ವಕೀಲರಿಂದ:</u>**

1. ದಿನಾಂಕ 25-10-2023 ರಂದು ನಾನು ತುಮಕೂರಿನಿಂದ ಯಶವಂತಪುರದಲ್ಲಿರುವ ಕಛೇರಿಗೆ ಬರುತ್ತಿದ್ದೆ. ನನ್ನ ಸ್ವಂತ ಮನೆ ಬೆಂಗಳೂರಿನ ಕೆಂಗೇರಿಯಲ್ಲಿದೆ ಆದರೆ ನಾನು ತುಮಕೂರಿನಲ್ಲಿ ವಾಸವಾಗಿರುತ್ತೇನೆ. ಅಪಘಾತದ ದಿನ ನಾನು ಬೆಂಗಳೂರಿಗೆ ಶಿಯಾಜ್ ಕಾರಿನಲ್ಲಿ ಕಛೇರಿಗೆ ಬರುತ್ತಿದ್ದೇನು. ಅಪಘಾತದ ದಿನ ನಾನು ಚಾಲನೇ ಮಾಡುತ್ತಿದ್ದ ಕಾರು ನನ್ನ ಸಹೋದರನಿಗೆ ಸೇರಿರುತ್ತದೆ. ಸದರಿ ಕಾರಿನ ಆರ್.ಸಿ., ಚಾಲನಾ ಪರವಾನಗಿ ಪತ್ರ ಮತ್ತು ವಿಮಾ ಪಾಲಿಸಿ ಹಾಜರುಪಡಿಸಿರುತ್ತೇನೆ. ನಾನು ವೈಯಕ್ತಿಕವಾಗಿ ಸ್ವಂತ ಕಾರನ್ನು ಹೊಂದಿರುವುದಿಲ್ಲ. ಅಪಘಾತದ ದಿನ ಕಾರಿನಲ್ಲಿ ನಾನು ಒಬ್ಬನೇ ಇದ್ದೇನು.

2. ಅಪಘಾತ ನಡೆದ ರಸ್ತೆ ಸಂಚಾರ ದಟ್ಟಣೆ ಹೆಚ್ಚಾಗಿರುವ ರಸ್ತೆ ಎಂದರೆ ಸರಿ. ಅಪಘಾತ ನಡೆದ ಸ್ಥಳದಿಂದ 10-13 ಅಡಿ ದೂರದಲ್ಲಿ ರಸ್ತೆಯ ಮೇಲೆ ರಸ್ತೆಯ ಉಬ್ಬು ಇದೆ ಎಂದರೆ ಮೇಲ್ಸೇತುವೆಯ ಮೇಲೆ ಯಾವುದೇ ರಸ್ತೆಯ ಉಬ್ಬುಗಳು ಇಲ್ಲ. ಅಪಘಾತದ ದಿನ ಸದರಿ ರಸ್ತೆಯ ಮೇಲೆ ಒಂದು ವಾಹನ ಕೆಟ್ಟು ನಿಂತಿತ್ತು ಎಂದರೆ ಟಾಟಾ ಇಂಡಿಕಾ ವಾಹನ ಕೆಟ್ಟು ನಿಂತಿತ್ತು ಅದರ ಪಕ್ಕದಲ್ಲಿ ಪೊಲೀಸ್ ಪೇದೆ ರಸ್ತೆಯ ಮಾರ್ಗವನ್ನು ನಿಯಂತ್ರಿಸುತ್ತಿದ್ದರು. ಆದ್ದರಿಂದ ಆ ಕಾರಣಕ್ಕಾಗಿ ವಾಹನಗಳು ನಿಧಾನವಾಗಿ ಚಲಿಸುತ್ತಿದ್ದವು ಎಂದರೆ ಸರಿ.

3. ಅಪಘಾತವು ಸರಣಿ ವಾಹನಗಳ ಅಪಘಾತವಾಗಿದೆ ಎಂದರೆ ಸರಿ. ನನ್ನ ಮುಂದಿನ ವಾಹನ ತಕ್ಷಣಕ್ಕೆ ಬ್ರೇಕ್ ಹಾಕಿದ್ದರಿಂದ ನಾನು ನನ್ನ ಕಾರನ್ನು ನಿಲ್ಲಿಸಿದ್ದರಿಂದ ನನ್ನ ಹಿಂದಿನ ವಾಹನ ನನಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನನ್ನ ಮುಂದಿನ ವಾಹನಕ್ಕೂ ಮತ್ತು

ನನ್ನ ವಾಹನಕ್ಕೂ ಸುರಕ್ಷಿತ ಅಂತರವನ್ನು ಕಾಯ್ದುಕೊಂಡಿದೆ ಎಂದು ನುಡಿಯುತ್ತಾರೆ. ನಾನು ತಕ್ಷಣಕ್ಕೆ ಬ್ರೆಕ್ ಹಾಕಿದ್ದರಿಂದ ಎದುರುದಾರರ ವಾಹನದ ಚಾಲಕನು ನನ್ನ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ.

4. ನಿಪಿ.4 ಸ್ಥಳ ಪಂಚನಾಮೆಯ ಪ್ರಕಾರ ಅಪಘಾತದ ಸ್ಥಳದಲ್ಲಿ ಯಾವುದೇ ವಾಹನದ ಬಿಡಿಭಾಗಗಳಾಗಲೀ, ಚಕ್ರದ ಗುರುತಗಳಾಗಲೀ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ.4 ರ ಸ್ಥಳ ಪಂಚನಾಮೆಯಲ್ಲಿ ಸಹಿ ನನ್ನದೇ ಇರುತ್ತದೆ. ಅಪಘಾತದ ನಂತರ ನನ್ನ ಕಾರನ್ನು ಮಾರುತಿ ಸುಜುಕಿ ಮಾಂಡವಿ ಶೋರೂಂ ಉತ್ತರಹಳ್ಳಿ ಶಾಖೆಗೆ ದುರಸ್ತಿಗಾಗಿ ತೆಗೆದುಕೊಂಡು ಹೋಗಿರುತ್ತೇನೆ. ವಾಹನ ಜಖಂಗಳ ಮೌಲ್ಯಮಾಪನವನ್ನು ಒತ್ತಾಯ ಪೂರ್ವಕವಾಗಿ ನಾನು ಹೆಚ್ಚಿಗೆ ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರಣಿ ಅಪಘಾತದಲ್ಲಿ ಎಲ್ಲಾ ವಾಹನಗಳಿಗೂ ಒಂದೇ ತರಹದ ಜಖಂಗಳು ಆಗಿದ್ದವು ಎಂದರೆ ಸರಿಯಲ್ಲ. ವಾಹನಗಳನ್ನು ತಪಾಸಣೆ ಮಾಡವಾಗ ನಾನು ಹಾಜರಿರಲಿಲ್ಲ ಎಂದರೆ ಸರಿ. ಆದ್ದರಿಂದ ನನಗೆ ವಾಹನಗಳಿಗಾದ ಜಖಂಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

5. ನನ್ನ ಸಹೋದರ ಮದುವೆ ವಿಚಾರವು ಎದುರುದಾರರಿಗೆ ಅಪಘಾತದ ಸಮಯಕ್ಕೆ ಗೊತ್ತಿರಲಿಲ್ಲ ಎಂದರೆ ಸರಿ. ನನ್ನ ವಾಹನಕ್ಕೆ ಮತ್ತು ಎದುರುದಾರರ ವಾಹನಕ್ಕೆ ವಿಮೆ ಇದ್ದು ವಿಮಾ ಕಂಪನಿಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಈ ಅಪಘಾತದಿಂದ ನನಗೆ ಮಾನಸಿಕ ಹಿಂಸೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಕೇಳಿರುವ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ಕಾರನ್ನು ನಾನೇ ಚಾಲನೇ ಮಾಡುತ್ತಿದ್ದ ಕಾರಣ ದೂರನ್ನು ನಾನೇ ನೀಡಿರುತ್ತೇನೆ. ನಾನು ಚಾಲನೇ ಮಾಡತ್ತಿದ್ದ ಕಾರಿನ ಮಾಲೀಕರು ಯಾವುದೇ ಪರಿಹಾರ ಅರ್ಜಿ ಎಲ್ಲಿಯೂ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಾನು ಚಾಲನೇ ಮಾಡತ್ತಿದ್ದ ಕಾರಿನ ಮಾಲೀಕರು ನನಗೆ ಈ

ಅರ್ಜಿ ಸಲ್ಲಿಸುವಂತ ಯಾವುದೇ ಅಧಿಕಾರ ಪತ್ರ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಕಾರಿನ ಮಾಲೀಕ ಖಾಸ ನನ್ನ ಸಹೋದರನಾಗಿರುವುದರಿಂದ ಅವರ ಪರವಾಗಿ ನಾನು ಈ ಅರ್ಜಿ ಸಲ್ಲಿಸಿರುತ್ತೇನೆ. ನಾನು ಚಾಲನೇ ಮಾಡತ್ತಿದ್ದ ಕಾರಿನ ಮಾಲೀಕರು ನನಗೆ ಯಾವುದೇ ಅಧಿಕಾರ ಪತ್ರ ನೀಡದೇ ಇರುವುದರಿಂದ ಮತ್ತು ನಾನು ಸದರಿ ಕಾರಿನ ಮಾಲೀಕನಾಗದೇ ಇರುವುದರಿಂದ ನಾನು ಈ ಪರಿಹಾರ ಅರ್ಜಿ ಸಲ್ಲಿಸಲು ಅರ್ಹನಲ್ಲ ಎಂದರೆ ಸರಿಯಲ್ಲ.

6. ಎದುರುದಾರರ ಕಾರಿನ ಸಂಖ್ಯೆ ಕೆಎ-05-ಎನ್‌ಇ-1031 ಎಂದು ನನ್ನ ಅರ್ಜಿಯ ಕಲಂ 14 ರಲ್ಲಿ ನಮೂದಾಗಿದೆ ಎಂದರೆ ಸರಿ. ನನ್ನ ಅರ್ಜಿಯಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣಾಪತ್ರದಲ್ಲಾಗಲೀ ಅಪಘಾತದ ದಿನ ನಾನು ಸಿಯಾಜ್ ಕಾರನ್ನು ಚಾಲನೇ ಮಾಡುತ್ತಿದ್ದೆ ಎಂದು ಹೇಳಿಲ್ಲ ಎಂದರೆ ದೂರಿನಲ್ಲಿ ಹೇಳಿರುತ್ತೇನೆ. ನನ್ನ ಪರಿಹಾರ ಅರ್ಜಿಯ ಕಲಂ ನಂ 14 ರಲ್ಲಿ ನಮುದಾಗಿರುವ ವಾಹನ ಸಂಖ್ಯೆ ಮಹೀಂದ್ರ ಥಾರ್ ಜೀಪ್ ಕೆಎ-05-ಎನ್ ಇ-1031 ಕ್ಕೂ ಮತ್ತು ಎದುರುದಾರರಿಗೂ ಯಾವುದೇಸಂಬಂಧವಿರದೇ ಇರುವುದರಿಂದ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

7. ನಾನು ಸದರಿ ಸರಣಿ ಅಪಘಾತದಲ್ಲಿ ನನ್ನ ಮುಂದೆ ಹೋಗುತ್ತಿದ್ದ ಕಾರಿಗೆ ಡಿಕ್ಕಿಪಡಿಸಿದ ಬಗ್ಗೆ ಮತ್ತು ಸದರಿ ವಾಹನಕ್ಕೆ ಉಂಟಾದ ಜಖಂಗಳ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಮತ್ತು ನನ್ನ ಅರ್ಜಿಯಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಅರ್ಜಿಯನ್ನು ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ನಾನು ಸಂಪೂರ್ಣ ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ.14 ಸೃಷ್ಟಿತ ಬಿಲ್ಲುಗಳು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ವಾಹನಕ್ಕೆ ಜಖಂಗಳು ಉಂಟಾಗಿವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಪೋಟೋ ಮತ್ತು ಸಿಡಿ ಗಳನ್ನು ಹಾಜರುಪಡಿಸಿರುತ್ತೇನೆ.

8. ಈ ಅಪಘಾತದಿಂದ ನನಗಾಗಲೀ ಅಥವಾ ನಾನು ಚಾಲನೇ ಮಾಡುತ್ತಿದ್ದ ಕಾರಿಗಾಗಲೀ ಯಾವುದೇ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಿಪಿ.14 ರಲ್ಲಿ ಅಪಘಾತದಿಂದ ಉಂಟಾದ ಜಖಂಗಳ ದುರಸ್ತಿಗಾಗಿ ಹಣ ಪಾವತಿಸಲಾಗಿದೆ ಎಂದು ನಮೂದಿಸಲಾಗಿದೆಯಾ ಎಂದರೆ ನಮೂದಿಸಿರುವುದಿಲ್ಲ. ಅಪಘಾತದಿಂದಾದ ಜಖಂಗಳನ್ನು ಹೊರತುಪಡಿಸಿಯು ಸಹ ಹೆಚ್ಚಿನ ದುರಸ್ತಿ ಮಾಡಿಸಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**